ಓ.ಎಸ್.ನಂಃ 66/21
ಪಿ.ಡಬ್ಲ್ಯೂಃ 1

<u>ದಿನಾಂಕಃ 27-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- 1 ರಿಂದ 4 ನೇ ಪ್ರತಿವಾದಿ ಪರಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದಃ-</u>

ವೆಂಕಟಸುಬ್ಬಯ್ಯನವರ ತಂದೆ ಹೆಸರು ಲೇಟ್ ಬಿ.ಎನ್. ಮಂಜಯ್ಯ. ಬಿ.ಎನ್. ಮಂಜಯ್ಯ ನವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ವಂಶವೃಕ್ಷದಲ್ಲಿ ಬಿ.ಎನ್. ಮಂಜಯ್ಯ ಇವರ ತಲೆಮಾರನ್ನು ತೋರಿಸಿಲ್ಲ ಎಂದರೆ ಸರಿ. ಬಿ.ಎನ್. ಮಂಜಯ್ಯ ಇವರ ಧರ್ಮಪತ್ನಿಯ ಹೆಸರನ್ನು ಸಹ ವಂಶವೃಕ್ಷದಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ , ಸಾಕ್ಷಿ ಮುಂದುವರೆದು ಅವರಿಗೆ ತಿಮ್ಮಮ್ಮ ಎಂಬ ಮೊದಲನೆ ಹೆಂಡತಿ ಮತ್ತು ಲಕ್ಷ್ಮೀದೇವಮ್ಮ ಎಂಬ ಎರಡನೇ ಹೆಂಡತಿ ಇರುತ್ತಾರೆ. ತಿಮ್ಮಮ್ಮ ಇವರಿಗೆ ಸೀತಾಲಕ್ಷ್ಮಿ ಎಂಬ ಹೆಸರಿತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.  ಬಿ.ಎನ್. ಮಂಜಯ್ಯ ಇವರಿಗೆ ತಿಮ್ಮಮ್ಮನವರ ಮುಖಾಂತರ ಬಿ.ಎನ್. ವೆಂಕಟಸುಬ್ಬಯ್ಯ , ಬಿ.ಎನ್. ಶೇಷಗಿರಿ ಮತ್ತು ತಂಗಮ್ಮ ಎಂಬ 3 ಜನ ಮಕ್ಕಳು. ಲಕ್ಷ್ಮೀದೇವಮ್ಮ ಇವರ ಮುಖಾಂತರ ಬಿ.ಎನ್. ಮಂಜಯ್ಯ ನವರಿಗೆ ಬಿ.ಎನ್. ಜನಾರ್ಧನಯ್ಯ ಮತ್ತು 5 ಜನ ಹೆಣ್ಣು ಮಕ್ಕಳು ಜನಿಸಿದ್ದಾರೆ. ದಿನಾಂಕ 22.01.1981 ರ ವಿಭಾಗ ಪತ್ರದಲ್ಲಿ ಈ ದಾವೆಯ ದಾವಾ ಅನುಸೂಚಿ ಐಟಂ ನಂ.1 ನ್ನು ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ನಮ್ಮ ಕುಟುಂಬಕ್ಕೆ ಇನ್ನೂ 3 ಸೊತ್ತುಗಳು ಇದ್ದು ಅವುಗಳನ್ನು ಸಹ ಸದರಿ ವಿಭಾಗಪತ್ರದಲ್ಲಿ ಸೇರಿಸಿಲ್ಲ ಎನ್ನುತ್ತಾರೆ.  ಇನ್ನೂ ಮೂರು ಸೊತ್ತುಗಳು ಇದ್ದವು

ಎಂದು ಹೇಳಲಾದ ಸೊತ್ತುಗಳು ನಿಮ್ಮ ಕುಟುಂಬದಲ್ಲಿ ಈಗ ಇವೆಯಾ ಎಂದರೆ ಸಾಕ್ಷಿ ಅವುಗಳನ್ನು ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ದಾವಾ ಅನುಸೂಚಿ ಎ ಸೊತ್ತು ನಿಮ್ಮ ಕುಟುಂಬಕ್ಕೆ ಹೇಗೆ ಬಂದಿದೆ ಎಂದರೆ ಸಾಕ್ಷಿ ನನ್ನ ಅಜ್ಜ ಬಿ ಎನ್ ವೆಂಕಟಸುಬ್ಬಯ್ಯ ಇವರು ಶ್ಯಾನುಬೋಗರಾಗಿದ್ದರು ಅವರು ದಾವಾ ಅನುಸೂಚಿ ಎ ಸೊತ್ತು ಹಾಗೂ ಇತರೆ ಸೊತ್ತುಗಳನ್ನು ಖರೀದಿ ಮಾಡಿದ್ದರು ಎನ್ನುತ್ತಾರೆ. ಸದರಿ ಸೊತ್ತನ್ನು ಯಾವಾಗ ಖರೀದಿಸಿದ್ದರು ಮತ್ತು ಈ ಸಂಬಂಧ ದಾಖಲೆ ಇದೆಯಾ ಎಂದರೆ ಸಾಕ್ಷಿ ಯಾವಾಗ ಖರೀದಿಸಿದರು ಎಂದು ಮಾಹಿತಿ ಇಲ್ಲ ಮತ್ತು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎನ್ನುತ್ತಾರೆ. ದಾವಾ ಅನುಸೂಚಿ ಎ ಸೊತ್ತು ನನ್ನ ಅಜ್ಜ ವೆಂಕಟಸುಬ್ಬಯ್ಯನವರ ಹೆಸರಿನಲ್ಲಿತ್ತು ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜ 1965 ರಲ್ಲಿ ತೀರಿಕೊಂಡಿರುತ್ತಾರೆ. ಮತ್ತು ಮನೆಯಲ್ಲಿ ಇಟ್ಟಿದ್ದ ದಾಖಲೆಗಳನ್ನು ಶ್ರೀಕಂಠಯ್ಯನವರು ಏನು ಮಾಡಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ದಾವಾ ಅನುಸೂಚಿ ಎ ಸೊತ್ತು ಪಿತ್ರಾರ್ಜಿತ ಆಸ್ತಿಯಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ದಾವಾ ಅನುಸೂಚಿ ಎ ಸೊತ್ತು ಪಿತ್ರಾರ್ಜಿತ ಆಸ್ತಿ ಆಗಿದ್ದರೆ ಈ ಸಂಬಂಧ ನ್ಯಾಯಾಲಯದ ಮುಂದೆ ಸಾಕ್ಷಿ ಹಾಜರುಪಡಿಸುತ್ತಿದ್ದರಾ ಎಂದರೆ ಸಾಕ್ಷಿ ನನ್ನ ತಾಯಿ ವಿವಾಹವಾಗಿ ಮನೆಗೆ ಬಂದ ನಂತರ ಅವರ ಸಹೋದರರು ದಾಖಲೆಯನ್ನು ಕೊಟ್ಟಿಲ್ಲ ಎನ್ನುತ್ತಾರೆ. ದಾವಾ ಅನುಸೂಚಿ ಎ ಸೊತ್ತನ್ನು ಶ್ರೀಕಂಠಯ್ಯ ಮತ್ತು ಬಿ.ಎನ್. ಮಂಜುನಾಥ ಇವರು ಹರಾಜಿನಲ್ಲಿ ಖರೀದಿಸಿದ್ದು ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ

ಅನುಸೂಚಿ ಎ ಸೊತ್ತು ಪ್ರಥಮತಃ ಶ್ರೀಕಂಠಯ್ಯ ಮತ್ತು ಬಿ ಎನ್ ಮಂಜುನಾಥ ರವರ ಹೆಸರಿನಲ್ಲಿ ಆಗಿದೆ ಹೊರತು ವೆಂಕಟಸುಬ್ಬಯ್ಯನವರ ಹೆಸರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ಈ ದಾವೆ ಹೂಡಿದ ಕಾಲಕ್ಕೆ ಮಂಜುನಾಥ ಇವರಿಗೆ ಅನಾರೋಗ್ಯವಾಗಿತ್ತು ಎಂದರೆ ಸರಿ. ಈ ದಾವೆ ಹೂಡಿದ ಕಾಲಕ್ಕೆ ಮಂಜುನಾಥ .ಬಿ.ಎನ್ ಇವರು ಓಡಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ತಮಗೆ ಮಾಹಿತಿಯ ಕೊರತೆಯಿಂದಾಗಿ ಬಿ.ಎನ್. ಮಂಜುನಾಥ ರವರ ವಾರಸುದಾರರು ಲಿಖಿತ ಹೇಳಿಕೆ ದಾಖಲಿಸಿದು ದಾಖಲಾತಿ ತೆಗೆಸಿದ ನಂತರ ದಾವಾ ಅನುಸೂಚಿ ಎ ಸೊತ್ತು ಪಿತ್ರಾರ್ಜಿತ ಆಸ್ತಿಯಲ್ಲ ಎಂಬ ಸಂಗತಿಯನ್ನು ಖಚಿತಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಂಜುನಾಥ ಈತ ನನ್ನ ವಿರುದ್ಧ ಬಸವನಗುಡಿ ಮತ್ತು ಜಯನಗರದಲ್ಲಿ ದೂರು ದಾಖಲು ಮಾಡಿ ನನ್ನ ಪ್ರತಿಷ್ಟೆಗೆ ಕುಂದು ತಂದಿದ್ದು ಆತ ಆರೋಗ್ಯವಾಗಿದ್ದರು ಎನ್ನುತ್ತಾರೆ. ದಾವಾ ಅನುಸೂಚಿ ಎ ಸೊತ್ತು ಪಿತ್ರಾರ್ಜಿತ ಆಸ್ತಿಯಾಗಿದ್ದರೆ 1981ರ ವಿಭಾಗಪತ್ರದಲ್ಲಿ ಅದನ್ನು ತೋರಿಸುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಎ ಸೊತ್ತು ಶ್ರೀಕಂಠಯ್ಯ ಮತ್ತು ಮಂಜುನಾಥ ಇವರ ಸ್ವಯಾರ್ಜಿತ ಆಸ್ತಿಯೂಗಿರುವುದರಿಂದ ಅದರಲ್ಲಿ ನನಗೆ ಹಿಸ್ಸಾ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಬಿ ಸೊತ್ತಿನ ಸಂಬಂಧ 1981 ರಲ್ಲೇ ಹಿಸ್ಸೆ ಆಗಿದ್ದು ಅದರಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಓ.ಎಸ್.ನಂಃ 66/21
ಪಿ.ಡಬ್ಲ್ಯೂಃ 1

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ವಿಃ